ಶ್ರೀ ವಾಟಾಳ್ ನಾಗರಾಜ್ :– ಪರಿಸ್ಥಿತಿ ಬಹಳ ಹದಗೆಟ್ಟು ಹೋಗಿದೆ. ನಾನು ಬೆಳಿಗ್ಗೆಯಿಂದ ಬಾಯಿ ಮುಚ್ಚಿಕೊಂಡು ಕುಳಿತಿದ್ದೇನೆ. ಅವರಿಗೆ ಕಾಡಿ ಬೇಡಿ ಹೇಳಿದೆ, ಮುಖ್ಯಮಂತ್ರಿಯವರಿಗೆ ಹೇಳಿದೆ, ಏನೂ ಆಗುತ್ತಿಲ್ಲ. ಮಾನ್ಯ ಯಡಿಯೂರಪ್ಪನವರೆ, ತಾವು ಸ್ವಲ್ಪ ಹೇಳಿ. ಪರಿಸ್ಥಿತಿ ಬಹಳ ಹದಗೆಟ್ಟು ಹೋಗಿದೆ. 8–10 ಲಕ್ಷವಾಗುತ್ತದೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ :– ಒಂದು ಹೊಸ ಯಂತ್ರವನ್ನು ಖರೀದಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸುತ್ತಿದ್ದಾರೆ. ಅದನ್ನು ಸಧ್ಯದಲ್ಲೇ ಮಂಜೂರು ಮಾಡಿಸಿ ಹೊಸ ಯಂತ್ರವನ್ನು ಅಳವಡಿಸಲು ವ್ಯವಸ್ಥೆ ಮಾಡುತ್ತೇವೆ. ತಾತ್ಕಾಲಿಕವಾಗಿ ಎಷ್ಟು ಟ್ಯಾಂಕರ್‌ಗಳಿದೆ, ಅದೆಲ್ಲವನ್ನು ಚಾಮರಾಜನಗರಕ್ಕೆ ತಂದು ನೀರನ್ನು ಕೊಡಿಸುವ ವ್ಯವಸ್ಥೆ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಧರಣಿ ಮಾಡಲು ಬಾವಿಗೆ ಬಂದರು)

ಉಪಾಧ್ಯಕ್ಷರು :– ನೀವು ನಿಮ್ಮ ಸ್ಥಾನಕ್ಕೆ ಹೋಗಿ, ಅವರು ಹೇಳುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ನೀವು ನಿಮ್ಮ ಸ್ಥಾನಕ್ಕೆ ಬನ್ನಿ. ಅದನ್ನು ಮಾಡಿಸಿಕೊಡುತ್ತೇನೆ.

ಶ್ರೀ ಅಮರೇಗೌಡ ಬಯ್ಯಾಪುರ್ :– ಎಲ್ಲಾ ಜಿಲ್ಲೆಗಳಲ್ಲಿ ಈ ರೀತಿಯ ಪರಿಸ್ಥಿತಿ ಇದೆ. ಆದ್ದರಿಂದ ಎಲ್ಲರೂ ಈ ರೀತಿ ಧರಣಿ ಮಾಡಬಹುದೇ?

(ಮಾನ್ಯ ವಾಟಾಳ್ ನಾಗರಾಜ್‌ರವರು ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ :– ಅದನ್ನು ಮಾಡಿಸಿಕೊಡುತ್ತೇನೆ ಬನ್ನಿ. ಈ ರೀತಿ ಬೇಜಾರು ಮಾಡಿಕೊಂಡರೆ ಹೇಗೆ?

ಶ್ರೀ ಜಿ.ಎಸ್. ಗಡ್ಡದೇವರ ಮಠ :– ಮಾನ್ಯ ಬಯ್ಯಾಪುರ್‌ರವರು ಹೇಳಿದಂತೆ ಎಲ್ಲಾ ತಾಲ್ಲೂಕುಗಳಲ್ಲೂ ಈ ಸಮಸ್ಯೆ ಇದೆ.